**Civil Misc No. 19/2023**
**ಪಿ.ಡಬ್ಲ್ಯೂ: 1 ,**

**ದಿನಾಂಕ :24-10-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟಿ ಸವಾಲು :- ಶ್ರೀ. ಆರ್. ಎ. ಎಮ್. ಎದುರುದಾರ ಪರ ವಕೀಲರಿಂದ :**

ನಾನು ಶಹಾಬಾದ ನ್ಯಾಯಾಲಯದಲ್ಲಿ ಸಲ್ಲಿಸಿದ ದಾವೆ ವಜಾ ಗೊಂಡಿದೆ. ನಂತರ ಸದರಿ ತೀರ್ಪು ವಿರುದ್ದ ಮೇಲ್ಮನವಿ ಸಲ್ಲಿಸಿದ್ದೆ ಎಂದರೆ ಸರಿ. ಸದರಿ ಮೇಲ್ಮನವಿ ಕ್ರಮ ಕೈಗೊಳ್ಳದ ಕಾರಣ ವಜಾ ಗೊಂಡಿದೆ ಎಂದರೆ ಸರಿ. ನಾನು ಆರಾಮ ಇರದ ಕಾರನ ಶಹಾಬಾದನ ಡಾ: ಕೋರೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತೇನೆ. ನನಗೆ ಲೋ ಬಿ.ಪಿ, ಶುಗರ್, ಮತ್ತು 2-3 ನರ ಬ್ಲಾಕ ಆಗಿದೆ ಅಂತಾ ತಿಳಿಸಿರುತ್ತಾರೆ, ಆದ ಕಾರಣ ನನಗೆ ಬರಲು ಆಗಿರುವುದಿಲ್ಲಾ. ನನಗೆ 3 ತಿಂಗಳ ಕಾಲ ಬೆಡ್ ರೆಸ್ಟ್ ತಿಳಿಸಿರುತ್ತಾರೆ, ಮತ್ತು ಮೇಲಿಂದ ಮೇಲೆ ಆರಾಮ ತಪ್ಪಿರುತ್ತದೆ. ನಾನು ಡಾ: ಕೋರೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ದಾಖಲೆಗಳು ನ್ಯಾಯಾಲಯಕ್ಕೆ ಸಲ್ಲಿಸಿಲ್ಲಾ. ನಾನು ಅಮೃತ ಆಸ್ಪತ್ರೆಯಲ್ಲಿ ಎಮ್.ಆರ್.ಐ. ಸ್ಕಾನಿಂಗ್ ಮಾಡಿಸಿದ್ದೇನೆ. ಸದರಿ ಎಮ್.ಆರ್.ಐ. ಸ್ಕಾನಿಂಗ್ ವರದಿ ಸಲ್ಲಿಸಿಲ್ಲಾ. ಎದುರುದಾರರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ . 607 ದಿನ ತಡವಾಗಿದೆ. ನನ್ನ ಗಂಡ ಪ್ರಾಥಮಿಕ ಶಾಲೆಯ ಮಖ್ಯೋಪ್ಯಾಧ್ಯಯರು ಆಗಿ ನಿವೃತ್ತ ಆಗಿದ್ದಾರೆ ಎಂದರೆ ಸರಿ. ನನ್ನ ಗಂಡನಿಗೆ ಶಹಾಬಾದ ನ್ಯಾಯಾಲಯದಲ್ಲಿ ದಾವಾ ಬಾಕಿ ಮತ್ತು ವಜಾ ಆದ ಮೇಲೆ ಮೇಲ್ಮನವಿ ಸಲ್ಲಿಸಿದ ಬಗ್ಗೆ ಅವರಿಗೆ ಎಲ್ಲಾ ಗೊತ್ತಿತ್ತು. ನ್ಯಾಯಾಲಯದ ಕಾಲಹರಣ ಮಾಡಿ, ನನಗೆ ಮೇಲ್ಮನವಿ ವಜಾ ಆದ ಬಗ್ಗೆ ಗೊತ್ತಿದ್ದರು ಉದ್ದೇಶಪೂರ್ವಕವಾಗಿ

**Civil Misc No. 19/2023**

ಪಿ.ಡಬ್ಲ್ಯೂ 1 ,

ಕಾಲವಿಳಂಬ ಮಾಡಿ ಅರ್ಜಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ ಮತ್ತು ನನಗೆ ಮೇಲ್ಮನವಿ ವಜಾ ಆದ ಬಗ್ಗೆ ಗೊತ್ತಿದ್ದರೂ ಸಹ ನನ್ನ ಬೇಜವಾಬ್ದಾರಿಯಿಂದ ದಿ: 31-03-2022 ರಂದು ಆದ ಆದೇಶವನ್ನು ಪ್ರಶ್ನಿಸಿದೇ ಕಾಲ ವಿಳಂಬ ಮಾಡಿ ಸುಳ್ಳು ಅರ್ಜಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ . ನನಗೆ ಯಾವುದೇ ಆರೋಗ್ಯ ಸಮಸ್ಯೆ ಇಲ್ಲಾ ಎಂದರೆ ಸರಿಯಲ್ಲ . ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲಾ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

**ಓ.ಹೇ.ಕೇ.ಸರಿ.ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಚಿತ್ತಾಪೂರ.**